# 2022–23 ಸಾಲಿನ ಮಾದರಿ ಪ್ರಶ್ನೆ ಪತ್ರಿಕೆ – 3

## ವಿಷಯ : ಪ್ರಥಮ ಭಾಷೆ – ಕನ್ನಡ

**ವಿಷಯ ಸಂಕೇತ : 01–K**

**ಅವಧಿ : 3 ಗಂಟೆ 15 ನಿಮಿಷ** **ಗರಿಷ್ಠ ಅಂಕಗಳು : 100**

**ಶಾಲಾ ಅಭ್ಯರ್ಥಿಗಳಿಗೆ**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. 1x6=6**

1. **ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರ ;**
   (ಎ) ದೀರ್ಘಸ್ವರ (ಬಿ) ಹ್ರಸ್ವಸ್ವರ
   (ಸಿ) ಪ್ಲುತಸ್ವರ (ಡಿ) ಸಂಯುಕ್ತಾಕ್ಷರ
2. ಆತ್ಮಾರ್ಥಕ ಸರ್ವನಾಪ ಪದಕ್ಕೆ ಉದಾಹರಣೆ ;
   (ಎ) ಪರ್ವತ (ಬಿ) ತಾನು
   (ಸಿ) ಅವನು (ಡಿ) ಯಾರು?
3. ಚತುರ್ಥಿ ವಿಭಕ್ತಿ ಕಾರಕಾರ್ಥ ;
   (ಎ) ಕರ್ತ್ರಾರ್ಥ (ಬಿ) ಕರ್ಮಾರ್ಥ
   (ಸಿ) ಸಂಪ್ರದಾನ (ಡಿ) ಕರಣಾರ್ಥ
4. ಕ್ರಿಯಾರ್ಥಕಾವ್ಯಯವನ್ನು ಸೂಚಿಸುವ ಪದ ;
   (ಎ) ಚೆನ್ನಾಗಿ (ಬಿ) ಸಾಕು
   (ಸಿ) ಮತ್ತು (ಡಿ) ಅಯ್ಯೋ
5. ತತ್ಪುರುಷ ಸಮಾಸ ಪದವಿದು ;
   (ಎ) ದೈವಭಕ್ತಿ (ಬಿ) ಮುಂಗೈ
   (ಸಿ) ಮೇಧಿನಿಪತಿ (ಡಿ) ಹೆದ್ದೊರೆ
6. 'ವಾಚಾಳಿ' ಎಂಬುದು ಈ ವ್ಯಾಕರಣಾಂಶವಾಗಿದೆ.
   (ಎ) ಕೃದಂತ ನಾಮ (ಬಿ) ತದ್ಧಿತಾಂತ ಭಾವನಾಮ
   (ಸಿ) ಕೃದಂತಾವ್ಯಯ (ಡಿ) ತದ್ಧಿತಾಂತ ನಾಮ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4x1=4**

7. ದಿಗಂತ : ಲೋಪಸಂಧಿ : : ಧೃತಿಗೆಟ್ಟು : ________
8. ದೀಪಿಕಾ : ದೀವಿಗೆ : : ಕುಠಾರ : ____________
9. ಇಲ್ಲದ್ವಂಗ : ಇಲ್ಲದಹಾಗೆ : : ಇಸವಾಸ : _________
10. ಆರ್ತತೆ : ಬಯಕೆ : : ಕೂರ್ಮೆ : ____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 1x7=7**

11. ನೆಲ್ಸನ್‌ರವರ ಮೂರ್ತಿಯಿರುವ ಸ್ಥಳದ ಹೆಸರೇನು?
12 ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
13. ಯಾವ ವ್ಯಕ್ತಿ ನಮಗೆ ಆದರ್ಶವಾಗಬಲ್ಲನು?
14. ಧರ್ಮ ಎಂದು ನಮ್ಮ ಪರಂಪರೆ ಯಾವುದನ್ನು ಒಕ್ಕಣಿಸಿದೆ?

15. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?
16. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?
17. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?

**IV.ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ 10x2=20**

18. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
19. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
20. ಜನರು ಮೂರ್ತಿಪೂಜೆ ಮಾಡಲು ಕಾರಣವೇನು?
21. ಮಂಚಮ್ಮದೇವಿ  ಮನೆಮಂಚಮ್ಮನಾಗಿದ್ದು ಹೇಗೆ ?
22. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?
23. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?
24. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
25. ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ವಿನಂತಿಸಿದ್ದ ಪತ್ರದ ಸಾಲುಗಳಲ್ಲಿ ದೇವರ ಪೂಜಾದಿಗಳನ್ನು ಮಾಡುವ ಬಗ್ಗೆ ಏನೆಂದು ವಿನಂತಿಸಿದ್ದಾರೆ?
26. ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರ ಮಾತಿನಲ್ಲಿ ಬರೆಯಿರಿ.
27. ಕ್ರಾಂತಿಕಾರಿಗಳು ಬ್ರಿಟಿಷ್ ಅಧಿಕಾರಿಯಾದ ಸ್ಕಾಟ್‌ನ ಹತ್ಯೆಗೆ ಯೋಜನೆ ರೂಪಿಸಲು ಕಾರಣವೇನು?

**V. ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6**

28. ದೇವನೂರ ಮಹಾದೇವ
29. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1x3=3**

30. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ. 1x3=3**

31. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1x3=3**

32 "ದೇಶ ಸುತ್ತಿ ನೋಡು ಕೋಶ ಓದಿ ನೋಡು

ಅಥವಾ

ತುಂಬಿದ ಕೊಡ ತುಳುಕುವುದಿಲ್ಲ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3=18**

33. "ದುಡ್ಡು ದುರಭಿಮಾನದ ತವರು."
34. "ಚಿನ್ನವಿಲ್ಲದೆ ಬದುಕಬಹುದು, ಅನ್ನವಿಲ್ಲದೆ ಬದುಕಲಾದೀತೆ?"
35. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"
36. "ಹೊಸಗಾಲದ ಹಸುಮಕ್ಕಳ ಹರಸಿ"
37. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"
38. "ಅರಸುಗಳ ವಾಜಿಯಂ ಬಿಡು"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** **1x4=4**

ಹಸುರಾಗಸ; ________________ ಹೊಸ ________________

________________ ಅಥವಾ ________________

________________ ________________

________________ ಬಿಸಿಲೂ! ________________ ಹಸುರಿಳೆಯುಸಿರೂ!

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **1x4=4**

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2x4=8**

41. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

ಅಥವಾ

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

ಅಥವಾ

ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

ಜೂನ್ 5ರ 'ವಿಶ್ವ ಪರಿಸರ ದಿನಾಚರಣೆ' ಬಂತೆಂದರೆ ವಿದ್ಯಾರ್ಥಿಗಳೆಲ್ಲ ವಿಶೇಷ ಅಂಭ್ರಮ. ಅಂದು ಏನೆಲ್ಲ ವರ್ಣರಂಜಿತ ಮೆರವಣಿಗೆಗಳು , ಎಷ್ಟೆಲ್ಲ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತವೆ. ಬೆಂಗಳೂರಿನಲ್ಲಂತೂ ಲಕ್ಷಾಂತರ ವಿದ್ಯಾರ್ಥಿಗಳು ಚಿತ್ರ ವಿಚಿತ್ರ ಮುಖವಾಡಗಳನ್ನು ಧರಿಸಿ ವಾಯುಮಾಲಿನ್ಯದ ವಿರುದ್ಧ ಮೌನಮೆರವಣಿಗೆ ಮಾಡುವುದೇನು; ಸಸ್ಯಸಂಪತ್ತಿನ ರಕ್ಷಣೆಯ ಘೋಷಣೆ ಮಾಡುತ್ತ ಲಾಲ್‌ಬಾಗಿನಿಂದ ಕಬ್ಬನ್ ಪಾರ್ಕ್‌ನವರೆಗೆ ಸಾಲಾಗಿ ಬರುವುದೇನು; ಜಲರಕ್ಷಣೆ ಮಾಡಬೇಕೆಂದು ಒತ್ತಾಯಿಸಿ ವಿಧಾನಸೌಧದಿಂದ ನೀರಿಗಾಗಿ ಓಟ ಮಾಡುವುದೇನು; ಕೆರೆಗಳ ರಕ್ಷಣೆ ಮಾಡಬೇಕೆಂದು ಒತ್ತಾಯಿಸಿ ಸ್ಯಾಂಕಿಟ್ಯಾಂಕ್ ಸುತ್ತ ಮಾನವ ಸರಪಳಿ ನಿರ್ಮಿಸುವುದು. ಕಂಠೀರವ ಕ್ರೀಡಾಂಗಣದಲ್ಲಿ ನೃತ್ಯ ಮಾಡುವುದು, ಕಲಾಪ್ರದರ್ಶನ ಮಾಡುವುದು. ಬೀದಿನಾಟಕ ಮಾಡುವುದು ಹೀಗೆ ಕಳೆದ ಹಲವಾರು ವರ್ಷಗಳಿಂದ ನಡೆಯತ್ತವೆ. ಆದರೂ ನಮ್ಮ ಜನರಿಗೆ ಪರಿಸರ ಕಾಳಜಿಯ ಬಗ್ಗೆ ಇನ್ನೂ ಅರಿವಾಗದಿರುವುದು ಸೋಜಿಗದ ಸಂಗತಿಯಾಗಿದೆ. ಇಂದು ಯುರೋಪ್ , ಅಮೇರಿಕಾ, ಆಸ್ಟ್ರೇಲಿಯಾ, ಜಪಾನಗಳಂತಹ ವಿದೇಶ ರಾಷ್ಟ್ರಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಜನಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಅಲ್ಲಿನವರು ಹಾಕಿಕೊಳ್ಳುವ ಕಾರ್ಯಗಳು ಕೂಡ ತೀರ ವಿಶಿಷ್ಟವಾಗಿರುತ್ತವೆ. ಗ್ರೀನ್‌ಪೀಸ್‌ನಂಥ ಪೃಥ್ವಿರಕ್ಷಣಾ ಯೋಧರ ದಟ್ಟಹೊಗೆ ಕಾರುವ ಕಾರ್ಖಾನೆಗಳ ಚಿಮಣಿಗಳ ಮೇಲೆ ಹತ್ತಿ ಶುದ್ಧಗಾಳಿ ನಮ್ಮೆಲ್ಲರ ಹಕ್ಕು ಎಂದು ಘೋಷಣೆ ಬರೆಯುತ್ತಾರೆ. ಹೆಮ್ಮರಗಳನ್ನು ಕಡಿದು ಸಾಗಿಸುವ ದಾರಿಗೆ ಅಡ್ಡಲಾಗಿ ಗುಂಡಿತೋಡಿ, ತಮಗೆ ತಾವೇ ಸರಪಳಿ ಬಿಗಿದು ಬೀಗ ಹಾಕಿ ಕೂತು ಬಿಡುತ್ತಾರೆ. ಚರ್ಮಕ್ಕಾಗಿ ಸೀಲ್‌ಪ್ರಾಣಿಗಳನ್ನು ಕೊಲ್ಲಬಾರದೆಂದು ಹಿಮಪ್ರಾಂತ್ಯಕ್ಕೆ ಹೋಗಿ ಸೀಲ್‌ಪ್ರಾಣಿಗಳ ಮೇಲೆ ಎನಾಮಲ್ ಬಣ್ಣಸುರಿದು ಚರ್ಮದ ಅಂದಗೆಡಿಸಿ ಬರುತ್ತಾರೆ. ಕಾರ್ಖಾನೆಗಳು ಸಮುದ್ರದ ಆಳಕ್ಕೆ ಕೊಳೆಯನ್ನು ಬಿಡಬಾರದೆಂದು ಮುಳುಕುವೀರರು ಸಮುದ್ರದ ಆಳಕ್ಕೆ ಹೋಗಿ ಕೊಳವೆಯ ಬಾಯಿಯನ್ನು ಕಟ್ಟಿ ಬರುತ್ತಾರೆ. ಇಂಥಹ ಕೆಚ್ಚೆದೆಯ ಸಾಹಸಗಳಲ್ಲಿ ತೊಡಗಿಕೊಂಡು ಮಾತ್ರ ಪರಿಸರ ರಕ್ಷಣೆ ಮಾಡುತ್ತಾರೆ.

**ಪ್ರಶ್ನೆಗಳು :**

43. ಅ) ವಿದೇಶಗಳಲ್ಲಿ ಪರಿಸರ ಸಂರಕ್ಷಣೆಗಾಗಿ ಯಾವ ರೀತಿ ಸಾಹಸಗಳಲ್ಲಿ ತೊಡಿಗಿಸಿಕೊಳ್ಳುತ್ತಾರೆ ?
ಆ) ವಿಶ್ವ ಪರಿಸರ ದಿನಾಚರಣೆಯಂದು ಬೆಂಗಳೂರಿನಲ್ಲಿ ನಡೆಯುವ ವೈವಿಧ್ಯಮಯ ಕಾರ್ಯಕ್ರಮ ಗಳಾವುವು?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

44. ನಿಮ್ಮನ್ನು ಹಾಸನದ ಶ್ರೀಹೊಯ್ಸಳ ಪ್ರೌಢಶಾಲೆಯಲ್ಲಿ ಓದುತ್ತಿರುವ ರಕ್ಷಿತ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಕುರಿತು ತುಮಕೂರಿನ ಶ್ರೀಸಿದ್ಧಗಂಗ ಮಠದಲ್ಲಿ 10ನೇ ತರಗತಿ ಓದುತ್ತಿರುವ ನಿಮ್ಮ ಸ್ನೇಹಿತ/ತೆಗೊಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಶಿವಮೊಗ್ಗದ ಕುವೆಂಪು ಪ್ರೌಢಶಾಲೆಯಲ್ಲಿ ನಿಮ್ಮನ್ನು ಮಂಡ್ಯದ ಶ್ರೀಕಾವೇರಿ ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ ಸುಮನ ಎಂದು ಭಾವಿಸಿಕೊಂಡು ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ ಜ್ಞಾನದೀಪಿಕಾ ಪುಸ್ತಕ ಭಂಡಾರಕ್ಕೆ ಒಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5=5**

45. ಸಮೂಹ ಮಾಧ್ಯಮಗಳು

**ಅಥವಾ**

ಸಾಮಾಜಿಕ ಪಿಡುಗುಗಳು